## 2014-15 ನೇ ಸಾಲಿನ ರಾಜ್ಯವಲಯ ಯೋಜನೆಯಾದ ತೋಟಗಾರಿಕೆ ನಿಗಮ ಮತ್ತು ಮಂಡಳಿಗಳಿಗೆ ಸಹಾಯಧನ ಲೆ. ಶೀ: 2401-00-108-2-52 (S-08) (ಉಪಶೀರ್ಷಿಕೆ: 101 Grant-in-aid) ಯೋಜನೆಯಡಿ ಕಾರ್ಯಕ್ರಮಗಳ ಅನುಷ್ಠಾನದ ಮಾರ್ಗಸೂಚಿ:

**ಕಾರ್ಯಕ್ರಮಗಳ ಹೆಸರು :**

A. ಮಾವು ಅಭಿವೃದ್ಧಿ ಮಂಡಳಿ

B. ದ್ರಾಕ್ಷಾರಸ ನೀತಿ

C. ಕೆ.ಹೆಚ್.ಎಫ್. ಮುಖಾಂತರ ತೋಟಗಾರಿಕೆ ಉತ್ಪನ್ನಗಳಿಗೆ ಸಮಗ್ರ ಮಾರುಕಟ್ಟೆ ಸೌಲಭ್ಯ ಕಾರ್ಯಕ್ರಮ

### A. ಮಾವು ಅಭಿವೃದ್ಧಿ ಮಂಡಳಿ

### I. ಯೋಜನೆಯ ಸಂಕ್ಷಿಪ್ತ ಪರಿಚಯ ಮತ್ತು ಮುಖ್ಯಾಂಶಗಳು:

**a) ಮಾವು ಅಭಿವೃದ್ಧಿ ಮಂಡಳಿ:**

ಕರ್ನಾಟಕ ರಾಜ್ಯದ ಮಾವು ಬೆಳೆಗಾರರ ಹಿತದೃಷ್ಟಿಯಿಂದ ಮಾವು ಉತ್ಪಾದನೆ ಮತ್ತು ಮಾರಾಟವನ್ನು ಅಭಿವೃದ್ಧಿ ಪಡಿಸುವ ಸಲುವಾಗಿ ಸರ್ಕಾರದ ಆದೇಶ **ಸಂ.ಕೃತೋಇ 160 ತೋಇವಿ 2010, ಬೆಂಗಳೂರು, ದಿನಾಂಕ:8-6-2010,** ರನ್ವಯ 2010-11ನೇ ಸಾಲಿನಲ್ಲಿ **"ಮಾವು ಅಭಿವೃದ್ಧಿ ಮಂಡಳಿ"** ಎಂಬ ಹೊಸ ರಾಜ್ಯ ವಲಯ ಯೋಜನೆಗೆ ಮಂಜೂರಾತಿ ದೊರಕಿರುತ್ತದೆ. ತೋಟಗಾರಿಕೆ ಇಲಾಖೆಯ ಆಡಳಿತ ವ್ಯಾಪ್ತಿಯಲ್ಲಿರುವ **ಕರ್ನಾಟಕ ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರಾಟ ನಿಗಮ ನಿಯಮಿತ ಈ ಸಂಸ್ಥೆಗೆ ಆರ್ಥಿಕ ನೆರವು ನೀಡುವುದು** ಈ ಯೋಜನಾ ಕಾರ್ಯಕ್ರಮದ ಉದ್ದೇಶವಾಗಿರುತ್ತದೆ. ಈ ಯೋಜನೆಯನ್ನು 2014-15ನೇ ಸಾಲಿನಲ್ಲಿ ಮುಂದುವರಿಸಿ, 2014-15ನೇ ಸಾಲಿನ ಆಯವ್ಯಯದ ಸವಿವರ ವೆಚ್ಚದ ಅಂದಾಜುಗಳು (ಸಂಪುಟ VI) ರಲ್ಲಿ ಮಂಜೂರಾತಿ ನೀಡಲಾಗಿದ್ದು, **"ತೋಟಗಾರಿಕೆ ನಿಗಮ ಮತ್ತು ಮಂಡಳಿಗಳಿಗೆ ಸಹಾಯಧನ"** ಯೋಜನೆಯಡಿ ಸೇರಿಸಲಾಗಿದ್ದು, **ಸದರಿ ಕಾರ್ಯಕ್ರಮಕ್ಕೆ ರೂ.754 ಲಕ್ಷಗಳ ಅನುದಾನವನ್ನು ನಿಗದಿಪಡಿಸಲಾಗಿರುತ್ತದೆ.**

### II. ಯೋಜನೆಯ ಉದ್ದೇಶಗಳು:

ಈ ಯೋಜನಾ ಕಾರ್ಯಕ್ರಮದಡಿ ಕರ್ನಾಟಕ ರಾಜ್ಯದ ಮಾವು ಬೆಳೆಗಾರರ ಸರ್ವತೋಮುಖ ಅಭಿವೃದ್ಧಿಗೆಂದು ಸ್ಥಾಪಿಸಲ್ಪಟ್ಟ ಕರ್ನಾಟಕ ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರಾಟ ನಿಗಮ ನಿಯಮಿತ ಈ ನಿಗಮಕ್ಕೆ ತೋಟಗಾರಿಕೆ ಇಲಾಖೆಯ ವತಿಯಿಂದ ಆರ್ಥಿಕ ನೆರವು ನೀಡುವುದು.

### III. ಯೋಜನೆಯ ಮುಖ್ಯ ಘಟಕ ಕಾರ್ಯಕ್ರಮಗಳು:

ಕರ್ನಾಟಕ ರಾಜ್ಯದ ಮಾವು ಬೆಳೆಗಾರರ ಹಿತದೃಷ್ಟಿಯಿಂದ ಮಾವು ಉತ್ಪಾದನೆ ಮತ್ತು ಮಾರಾಟವನ್ನು ಅಭಿವೃದ್ಧಿ ಪಡಿಸುವ ಸಲುವಾಗಿ ಸ್ಥಾಪಿಸಲ್ಪಟ್ಟಿರುವ ಮಾವು ನಿಗಮದ **ಆರ್ಥಿಕ ಸ್ವಾವಲಂಬನೆ, ನಿಗಮದ ಸಿಬ್ಬಂದಿ / ಅಧಿಕಾರಿಗಳ ವೇತನ ಮತ್ತು ಇತರೆ ವೆಚ್ಚಗಳು ಹಾಗೂ ಮಾವು ಬೆಳೆಗಾರರಿಗೆ ಅತ್ಯಗತ್ಯವಾಗಿ ಬೇಕಾಗಿರುವ ಸೌಲಭ್ಯಗಳು ಮತ್ತು ಅರಿವು ಮೂಡಿಸುವ ಕಾರ್ಯಕ್ರಮಗಳನ್ನು** ಹಮ್ಮಿಕೊಳ್ಳಲು ತೋಟಗಾರಿಕಾ ಇಲಾಖೆಯ ವತಿಯಿಂದ ಅನುದಾನವನ್ನು ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರಾಟ ನಿಗಮ ನಿಯಮಿತ, ರವರಿಗೆ ನೀಡಲಾಗುವುದು. ಈ ಕೆಳಕಂಡ ಘಟಕ ಕಾರ್ಯಕ್ರಮಗಳಿಗೆ ನೀಡಲಾಗುವುದು.

ಅ). **<u>ಷೇರುಧನ:</u>** ಮಾವು ನಿಗಮದ ಸ್ವಾವಲಂಬನೆಗೆ ತೋಟಗಾರಿಕೆ ಇಲಾಖೆಯಿಂದ ಆರ್ಥಿಕ ನೆರವು ನೀಡುವುದು.

ಆ) **ಅಭಿವೃದ್ಧಿ ಚಟುವಟಿಕೆಗಳನ್ನು** ಕೈಗೊಳ್ಳಲು ಮಾವು ನಿಗಮಕ್ಕೆ ಅನುದನ ಒದಗಿಸುವುದು.

ಇ) **ಮಾವು ನಿಗಮದ ಸಿಬ್ಬಂದಿ/ಅಧಿಕಾರಿಗಳ ವೇತನ** ಮತ್ತು **ಇತರೆ ವೆಚ್ಚಗಳನ್ನು** ಭರಿಸಲು ಅನುದಾನ ಒದಗಿಸುವುದು.

ಈ ಯೋಜನೆಯ **ಅನುಷ್ಠಾನಾಧಿಕಾರಿಗಳು ತೋಟಗಾರಿಕೆ ಉಪ ನಿರ್ದೇಶಕರು (ಜಿ.ಪಂ) ಬೆಂಗಳೂರು ನಗರ** ರವರಾಗಿರುತ್ತಾರೆ. **ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರಾಟ ನಿಗಮ ನಿಯಮಿತ,** ರವರು ಕೆಲವು ಘಟಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಕ್ರಿಯಾ ಯೋಜನೆ ಸಲ್ಲಿಸಿರುತ್ತಾರೆ. ಸದರಿ ಕ್ರಿಯಾ ಯೋಜನೆಯನ್ನು ಅನುಬಂಧ (1) ರಲ್ಲಿ ಒದಗಿಸಲಾಗಿದೆ.

**<u>ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರಾಟ ನಿಗಮ ನಿಯಮಿತ, ರವರು ಸದರಿ ಕಾರ್ಯಕ್ರಮಗಳನ್ನು ಮಾವು ನಿಗಮದ ನಿರ್ದೇಶಕರ ಮಂಡಳಿಯ (Board of Directors) ಅನುಮೋದನೆ ಪಡೆದು ಅನುದಾನ ವಿನಿಯೋಗಿಸಿ ಅನುಷ್ಠಾನಗೊಳಿಸತಕ್ಕದ್ದು.</u>**

## IV. <u>ಅನುದಾನ ಮತ್ತು ಸಹಾಯಧನ :</u>

2014-15ನೇ ಸಾಲಿನಲ್ಲಿ ಲೆಕ್ಕ ಶೀರ್ಷಿಕೆ:2401-00-108-2-52 (ಯೋಜನೆ) ಅಡಿ ಒಟ್ಟು **<u>ರೂ.754 ಲಕ್ಷ -ಗಳನ್ನು</u>** ನಿಗಧಿಪಡಿಸಿದ್ದು, ಈ ಅನುದಾನವನ್ನು ಈ ಕೆಳಕಂಡಂತೆ ವರ್ಗೀಕರಿಸಲಾಗಿದೆ.

| **ಕಾಂಪೋನೆಂಟ್** | **ನಿಗಧಿಯಾದ ಅನುದಾನ** |
|---|---|
| ಷೇರುಧನ (Corpus Fund) | ರೂ.164 ಲಕ್ಷಗಳು |
| ಅಭಿವೃದ್ಧಿ ಚಟುವಟಿಕೆಗಳು | ರೂ.354 ಲಕ್ಷಗಳು |
| ಹೊಗಳಗೆರೆ ಮಾವು ಅಭಿವೃದ್ಧಿ ಕೇಂದ್ರದ ನಿರ್ವಹಣೆ ಮತ್ತು ಅಭಿವೃದ್ಧಿ | ರೂ.136 ಲಕ್ಷಗಳು |
| ವೇತನ ಮತ್ತು ಇತರೆ | ರೂ.100 ಲಕ್ಷಗಳು |

## V. <u>ತಾಂತ್ರಿಕ ವೈಶಿಷ್ಟತೆಗಳು:</u>

**<u>ಮಾವು ಅಭಿವೃದ್ಧಿ ಮಂಡಳಿ</u>**:ಕರ್ನಾಟಕ ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರಾಟ ನಿಗಮ ನಿಯಮಿತ, ಈ ನಿಗಮದ ಆರ್ಥಿಕ ಸ್ವಾವಲಂಬನೆಗಾಗಿ ಹಾಗೂ ಅಭಿವೃದ್ಧಿ ಚಟುವಟಿಕೆಗಳ ಅನುಷ್ಠಾನದ ಮೂಲಕ ರಾಜ್ಯದ ಮಾವು ವಲಯದ ಸರ್ವತೋಮುಖ ಅಭಿವೃದ್ಧಿ ಮಾಡುವುದು.

## VI . <u>ನಿರ್ದೇಶನಾಲಯದ ಅನುಮೋದನೆ</u>:

ಸರ್ಕಾರದ ಆದೇಶ ಹಾಗೂ ಅನುಮೋದಿತ MPIC ಅನ್ವಯ, ಅನುದಾನದ ಲಭ್ಯತೆಯಾನುಸಾರ ಮತ್ತು ತೋಟಗಾರಿಕೆ ನಿರ್ದೇಶನಾಲಯದಿಂದ ಬಿಡುಗಡೆಯಾದ ಅನುದಾನಕ್ಕೆ ಅನುಗುಣವಾಗಿ ತೋಟಗಾರಿಕೆ ನಿರ್ದೇಶನಾಲಯದಿಂದ ಮಂಜೂರಾತಿ ಪಡೆದು, ನಿಗಧಿತ ಅನುದಾನವನ್ನು "**ಕರ್ನಾಟಕ ರಾಜ್ಯ ಮಾವು ಅಭಿವೃದ್ಧಿ ಮತ್ತು**

**ಮಾರಾಟ ನಿಗಮ ನಿಯಮಿತ",** ಈ ಸಂಸ್ಥೆಗೆ ನಿಯಮಾನುಸಾರ Grant- in-Aid ಬಿಲ್ಲಿನ ಮೂಲಕ ನೀಡಲು ತೋಟಗಾರಿಕೆ ಉಪ ನಿರ್ದೇಶಕರು (ಜಿ.ಪಂ), ಬೆಂಗಳೂರು ನಗರ ಜಿಲ್ಲೆ, ರವರು ಕ್ರಮವಹಿಸುವುದು.

**VII.ಅನುಷ್ಠಾನ ವೇಳಾಪಟ್ಟಿ:**

ಯೋಜನೆಗೆ ನಿಗಧಿಪಡಿಸಿದ ಅನುಷ್ಠಾನದ ವೇಳಾಪಟ್ಟಿಯಂತೆ ಮತ್ತು MPIC ಅನುಸಾರ ಅನುಷ್ಠಾನಗೊಳಿಸತಕ್ಕದ್ದು.ಈ ಯೋಜನೆಯ ಈಎರಡು ಕಾರ್ಯಕ್ರಮಗಳ ಅನುಷ್ಠಾನಾಧಿಕಾರಿಗಳು ತೋಟಗಾರಿಕೆ ಉಪ ನಿರ್ದೇಶಕರು (ಜಿ.ಪಂ), ಬೆಂಗಳೂರು ನಗರ ಜಿಲ್ಲೆ, ರವರಾಗಿರುತ್ತಾರೆ.

**VIII.ಆರ್ಥಿಕ ಪ್ರತ್ಯಾಯೋಜನೆ ( Delegation of Power) :**

ಮಾವು ನಿಗಮಕ್ಕೆ ನೀಡಲ್ಪಡುವ ಅನುದಾನದ ವೆಚ್ಚ ಭರಿಸುವ ಮುನ್ನ, ತೋಟಗಾರಿಕೆ ಉಪ ನಿರ್ದೇಶಕರು (ಜಿ.ಪಂ), ಬೆಂಗಳೂರು ನಗರ ಜಿಲ್ಲೆ, ರವರು ನಿರ್ದೇಶನಾಲಯಕ್ಕೆ ಪ್ರಸ್ತಾವನೆಗಳನ್ನು ಸಲ್ಲಿಸಿ, ಅನುಮೋದನೆ / ಮಂಜೂರಾತಿ ಪಡೆಯುವುದು.

**B. ದ್ರಾಕ್ಷರಸ ನೀತಿ**

**I. ಯೋಜನೆಯ ಸಂಕ್ಷಿಪ್ತ ಪರಿಚಯ ಮತ್ತು ಮುಖ್ಯಾಂಶಗಳು:**

ಕರ್ನಾಟಕ ರಾಜ್ಯದಲ್ಲಿ ವೈನ್ ದ್ರಾಕ್ಷಿ ತಳಿಗಳ ಪ್ರವರ್ಧನೆಗಾಗಿ ಹಾಗೂ ವೈನ್ ಕೈಗಾರಿಕೆಗಳ ಉತ್ಪಾದನೆಯನ್ನು ಹೆಚ್ಚಿಸಲು ದ್ರಾಕ್ಷಾರಸ ನೀತಿಯನ್ನು 2007-08ನೇ ಸಾಲಿನಿಂದ ಅನುಷ್ಠಾನಗೊಳಿಸಲಾಗುತ್ತಿದೆ. ಸದರಿ ದ್ರಾಕ್ಷಾರಸ ನೀತಿಯನ್ನು ಅನುಷ್ಠಾನಗೊಳಿಸಲು ಪ್ರತ್ಯೇಕವಾಗಿ ಕರ್ನಾಟಕ ದ್ರಾಕ್ಷಾರಸ ಮಂಡಳಿಯನ್ನು 2007 ರಲ್ಲಿ ಸ್ಥಾಪಿಸಲಾಗಿದೆ.

ಈ ಮಂಡಳಿಗೆ ಅಭಿವೃದ್ಧಿ ಚಟುವಟಿಕೆಗಳನ್ನು (Wine Festival, Training, etc) ಕೈಗೊಳ್ಳುವ ಸಲುವಾಗಿರೂ.200 ಲಕ್ಷಗಳನ್ನು ಕರ್ನಾಟಕ ದ್ರಾಕ್ಷಾರಸ ಮಂಡಳಿಗೆ ನೀಡಲಾಗುವುದು.

**II. ಯೋಜನೆಯ ಉದ್ದೇಶಗಳು:**

ದ್ರಾಕ್ಷಾರಸ ನೀತಿ ಯೋಜನಾ ಕಾರ್ಯಕ್ರಮದಡಿ ತೋಟಗಾರಿಕೆ ಇಲಾಖೆಯಿಂದ ಕರ್ನಾಟಕ ದ್ರಾಕ್ಷಾರಸ ಮಂಡಳಿಯ ಅಭಿವೃದ್ಧಿ ಚಟುವಟಿಕೆಗಳಾಗಿ ರೂ.200 ಲಕ್ಷಗಳ ಅನುದಾನವನ್ನ ಒದಗಿಸುವುದು.

**III. ಯೋಜನೆಯ ಮುಖ್ಯ ಘಟಕ ಕಾರ್ಯಕ್ರಮಗಳು:**

ಕರ್ನಾಟಕ ರಾಜ್ಯದಲ್ಲಿ **ವೈನ್ ದ್ರಾಕ್ಷಿ ತಳಿಗಳ ಪ್ರವರ್ಧನೆಗಾಗಿ, ವೈನ್ ಕೈಗಾರಿಕೆಗಳ ಉತ್ಪಾದನೆಯನ್ನು ಹೆಚ್ಚಿಸಲು** ಹಾಗೂ **ದ್ರಾಕ್ಷಾರಸ ಮೇಳದಂತಹ ಅಭಿವೃದ್ಧಿ ಚಟುವಟಿಕೆಗಳನ್ನು** ಹಮ್ಮಿಕೊಳ್ಳಲು ತೋಟಗಾರಿಕೆ ಇಲಾಖೆಯಿಂದ ಅನುದಾನವನ್ನು **ಕರ್ನಾಟಕ ದ್ರಾಕ್ಷಾರಸ ಮಂಡಳಿಗೆ ನೀಡಲಾಗುವುದು.**

ಸದರಿ ಅನುದಾನದಲ್ಲಿ ಕೆಲವು ಘಟಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು **ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ದ್ರಾಕ್ಷಾರಸ ಮಂಡಳಿ,** ರವರು ಕ್ರಿಯಾ ಯೋಜನೆಯ ಸಲ್ಲಿಸಿರುತ್ತಾರೆ. ಸದರಿ ಕ್ರಿಯಾ ಯೋಜನೆಯನ್ನು **ಅನುಬಂಧ-2** ರಲ್ಲಿ ಲಗತ್ತಿಸಿದೆ.

**ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ದ್ರಾಕ್ಷಾರಸ ಮಂಡಳಿ, ರವರು ಸದರಿ ಕಾರ್ಯಕ್ರಮಗಳನ್ನು ದ್ರಾಕ್ಷಾರಸ ಮಂಡಳಿಯ ನಿರ್ದೇಶಕರ ಮಂಡಳಿಯ (Board of Directors) ಅನುಮೋದನೆ ಪಡೆದು ಅನುಷ್ಠಾನಗೊಳಿಸತಕ್ಕದ್ದು.**

**ಸದರಿ ಅನುದಾನವನ್ನು ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ದ್ರಾಕ್ಷಾರಸ ಮಂಡಳಿ, ಬೆಂಗಳೂರು, ರವರಿಗೆ Grant-in-Aid Bill ಮೂಲಕ ತೋಟಗಾರಿಕೆ ನಿರ್ದೇಶನಾಲಯದಿಂದ ಆಡಳಿತಾತ್ಮಕ ಮಂಜೂರಾತಿ ಆದೇಶವನ್ನು ಪಡೆದು ತೋಟಗಾರಿಕೆ ಉಪ ನಿರ್ದೇಶಕರು (ಜಿಪಂ) ಬೆಂಗಳೂರು ನಗರ, ರವರು ನಿಯಮಾನುಸಾರ ನೀಡತಕ್ಕದ್ದು.**

**IV.ಅನುದಾನ ಮತ್ತು ಸಹಾಯಧನ :**

2014-15ನೇ ಸಾಲಿನಲ್ಲಿ ಲೆಕ್ಕ ಶೀರ್ಷಿಕೆ:2401-00-108-2-52 (ಯೋಜನೆ) ಅಡಿ ಒಟ್ಟು **ರೂ.200 ಲಕ್ಷಗಳ** ಅನುದಾನವನ್ನು **ಅಭಿವೃದ್ಧಿ ಚಟುವಟಿಕೆಗಳಿಗಾಗಿ ನಿಗದಿಗೊಳಿಸಲಾಗಿದೆ.**

**V. ತಾಂತ್ರಿಕ ವೈಶಿಷ್ಟತೆಗಳು:**

ಕರ್ನಾಟಕ "ದ್ರಾಕ್ಷಾರಸ ನೀತಿ" ಮಂಡಳಿಗೆ ತೋಟಗಾರಿಕೆ ಇಲಾಖೆಯಿಂದ ಒದಗಿಸುವ ಅನುದಾನದಲ್ಲಿ ಅಭಿವೃದ್ಧಿ ಚಟುವಟಿಕೆಗಳನ್ನು ಹಮ್ಮಿಕೊಳ್ಳಲು ಅನುವು ಮಾಡುವುದು ಹಾಗೂ ತನ್ಮೂಲಕ ದ್ರಾಕ್ಷಾರಸ ವಲಯವನ್ನು ಅಭಿವೃದ್ಧಿ ಪಡಿಸುವುದು.

**VI. ನಿರ್ದೇಶನಾಲಯದ ಅನುಮೋದನೆ:-**

ಸರ್ಕಾರದ ಆದೇಶ ಹಾಗೂ ಅನುಮೋದಿತ MPIC ಅನ್ವಯ, ಅನುದಾನದ ಲಭ್ಯತೆಯನುಸಾರ ಮತ್ತು ತೋಟಗಾರಿಕೆ ನಿರ್ದೇಶನಾಲಯದಿಂದ ಬಿಡುಗಡೆಯಾದ ಅನುದಾನಕ್ಕೆ ಅನುಗುಣವಾಗಿ ತೋಟಗಾರಿಕೆ ನಿರ್ದೇಶನಾಲಯದಿಂದ ಮಂಜೂರಾತಿ ಪಡೆದು, ನಿಗದಿತ ಅನುದಾನವನ್ನು "**ಕರ್ನಾಟಕ ದ್ರಾಕ್ಷಾರಸ ಮಂಡಳಿ**", ಈ ಸಂಸ್ಥೆಗೆ ನಿಯಮಾನುಸಾರ Grant- in-Aid ಬಿಲ್ಲನ್ನು ತಯಾರಿಸಿ ಅನುದಾನವನ್ನು ನೀಡಲು ತೋಟಗಾರಿಕೆ ಉಪ ನಿರ್ದೇಶಕರು (ಜಿ.ಪಂ), ಬೆಂಗಳೂರು ನಗರ ಜಿಲ್ಲೆ, ರವರು ಕ್ರಮವಹಿದುವುದು.

**VII.ಅನುಷ್ಠಾನ ವೇಳಾಪಟ್ಟಿ:**

**ಯೋಜನೆಗೆ ನಿಗದಿಪಡಿಸಿದ ಅನುಷ್ಠಾನದ ವೇಳಾಪಟ್ಟಿಯಂತೆ ಮತ್ತು MPIC ಅನುಸಾರ ಅನುಷ್ಠಾನಗಿೊಳಿಸತಕ್ಕದ್ದು.ಈ ಯೋಜನೆಯ ಈಎರಡು ಕಾರ್ಯಕ್ರಮಗಳ ಅನುಷ್ಠಾನಾಧಿಕಾರಿಗಳು ತೋಟಗಾರಿಕೆ ಉಪ ನಿರ್ದೇಶಕರು (ಜಿ.ಪಂ), ಬೆಂಗಳೂರು ನಗರ ಜಿಲ್ಲೆ, ರವರಾಗಿರುತ್ತಾರೆ. .**

**VIII.ಆರ್ಥಿಕ ಪ್ರತ್ಯಾ ಯೋಜನೆ ( Delegation of Power) :**

ಕರ್ನಾಟಕ ದ್ರಾಕ್ಷಾರಸ ಮಂಡಳಿಗೆ ನೀಡಲ್ಪಡುವ ಅನುದಾನದ ವೆಚ್ಚ ಭರಿಸುವ ಮುನ್ನ, ತೋಟಗಾರಿಕೆ ಉಪ ನಿರ್ದೇಶಕರು (ಜಿ.ಪಂ), ಬೆಂಗಳೂರು ನಗರ ಜಿಲ್ಲೆ, ರವರು ನಿರ್ದೇಶನಾಲಯಕ್ಕೆ ಪ್ರಸ್ತಾವನೆಗಳನ್ನು ಸಲ್ಲಿಸಿ, ಅನುಮೋದನೆ / ಮಂಜೂರಾತಿ ಪಡೆಯುವುದು.

## C. ತೋಟಗಾರಿಕೆ ಉತ್ಪನ್ನಗಳ ಸಮಗ್ರ ಮಾರುಕಟ್ಟೆ ಸೌಲಭ್ಯ ನಿರ್ಮಾಣ

**I. ಯೋಜನೆಯ ಸಂಕ್ಷಿಪ್ತ ಪರಿಚಯ ಮತ್ತು ಮುಖ್ಯಾಂಶಗಳು:**

1. ಆಧುನಿಕ ಬೇಸಾಯ ಪದ್ಧತಿಯ ಪಾಲನೆಯಿಂದಾಗಿ ರಾಜ್ಯದ ತೋಟಗಾರಿಕೆ ಉತ್ಪಾದನೆಯು ಹೆಚ್ಚುತ್ತಿದೆ. ಉತ್ತಮ ಕೊಯ್ಲೋತ್ತರ ನಿರ್ವಹಣೆ ಮತ್ತು ಮಾರುಕಟ್ಟೆಗಳ ಕೊರತೆಯಿಂದಾಗಿ ಉತ್ಪಾದನೆಯ ಶೇ 30% ರಷ್ಟು ಕೊಯ್ಲೋತ್ತರ ಹಾನಿ ಉಂಟಾಗುತ್ತಿದೆ. ಹಣ್ಣು ಮತ್ತು ತರಕಾರಿಗಳ ಕೊಯ್ಲೋತ್ತರ ಹಾನಿಯ ನಿವಾರಣೆಗಾಗಿ ತೋಟಗಾರಿಕೆ ಉತ್ಪನ್ನಗಳಿಗೆ ಸಮಗ್ರ ಮಾರುಕಟ್ಟೆ ಸೌಲಭ್ಯಗಳನ್ನು ಒದಗಿಸುವುದಲ್ಲದೇ ಅವುಗಳ ಸಂಸ್ಕರಣೆಗಾಗಿಯೂ ಒತ್ತು ನೀಡಬೇಕಾಗುತ್ತದೆ.
2. 2014-15 ನೇ ಸಾಲಿನ **ತೋಟಗಾರಿಕೆ ನಿಗಮ ಮತ್ತು ಮಂಡಳಿಗಳಿಗೆ ಸಹಾಯಧನ** ಯೋಜನೆಯಡಿ ಕರ್ನಾಟಕ ರಾಜ್ಯ ಸಹಕಾರಿ ತೋಟಗಾರಿಕೆ ಮಾರಾಟ ಮಹಾಮಂಡಳ ನಿಯಮಿತ (ಕೆ.ಹೆಚ್.ಎಫ್.) ಬೆಂಗಳೂರು ರವರಿಗೆ **ತೋಟ -ಗಾರಿಕೆ ಉತ್ಪನ್ನಗಳ ಸಮಗ್ರ ಮಾರುಕಟ್ಟೆ ಸೌಲಭ್ಯ ನಿರ್ಮಾಣ ಕಾರ್ಯಕ್ರಮ**ವನ್ನು ಅನುಷ್ಠಾನಗೊಳಿಸಲು **ರೂ.500.00 ಲಕ್ಷಗಳ** ಅನುದಾನ ನಿಗದಿಯಾಗಿರುತ್ತದೆ.
3. ಸದರಿ ಯೋಜನೆಯಡಿ ರೈತರು ಬೆಳೆದಂತಹ ಹಣ್ಣು ಮತ್ತು ತರಕಾರಿಗಳಿಗೆ ಉತ್ತಮ ಮಾರುಕಟ್ಟೆ ಸೌಲಭ್ಯ, ಕೊಯ್ಲೋತ್ತರ ಹಾನಿಯನ್ನು ತಡೆಯಲು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

**II. ಯೋಜನೆಯ ಉದ್ದೇಶಗಳು:**

1. ಗ್ರಾಹಕರಿಗೆ ಉತ್ತಮ ಗುಣಮಟ್ಟದ ಹಣ್ಣು ಮತ್ತು ತರಕಾರಿಗಳನ್ನು ಒದಗಿಸುವುದು.
2. ತೋಟಗಾರಿಕೆ ಬೆಳೆ ಬೆಳೆಯುವ ರೈತರ ಉತ್ಪನ್ನಗಳಿಗೆ ಉತ್ತಮ ಬೆಲೆ ದೊರಕಿಸುವುದು.
3. ತೋಟಗಾರಿಕೆಯ ರಫ್ತು ಉತ್ತೇಜಿಸುವುದು.
4. ಹಣ್ಣು ಮತ್ತು ತರಕಾರಿಗಳ ಕೊಯ್ಲೋತ್ತರ ಹಾನಿ ಕಡಿಮೆಗೊಳಿಸುವುದು.
5. ಹಣ್ಣು ಮತ್ತು ತರಕಾರಿಗಳ ಕೊಯ್ಲೋತ್ತರ ಮೌಲ್ಯವರ್ಧನೆ.
6. ಮಾನವ ಸಂಪನ್ಮೂಲ ಸದ್ಬಳಕೆ.

**III. ಯೋಜನೆಯ ಮುಖ್ಯ ಘಟಕ ಕಾರ್ಯಕ್ರಮಗಳು:**

1. ಜಿಲ್ಲಾ ಹಾಪ್‌ಕಾಮ್ಸ್ ಅಧೀನ ತೋಟಗಾರಿಕೆ ಉತ್ಪನ್ನಗಳಿಗೆ ಉನ್ನತ ಮಾರುಕಟ್ಟೆ ಕೇಂದ್ರವನ್ನು ಸ್ಥಾಪಿಸುವ ಬಗ್ಗೆ.
2. ಸ್ಪಾಟ್ ಬಿಲ್ಲಿಂಗ್ ಮಿಷನ್
3. ಆಧುನಿಕ ಮಾರಾಟ ಮಳಿಗೆ
4. ತರಬೇತಿ ಕಾರ್ಯಕ್ರಮ
5. ಪ್ರಚಾರ ಕಾರ್ಯಕ್ರಮ
6. ಮಳಿಗೆಗಳಿಗೆ ಮೋಡೆಮ್ ಅಳವಡಿಸುವ ಬಗ್ಗೆ
7. ಮಾರಾಟ ಮಳಿಗೆಗಳಿಗೆ ಸೋಲಾರ್ ದೀಪ ಅಳವಡಿಕೆ
8. ಆಡಳಿತ ವೆಚ್ಚ

**IV.ಅನುದಾನ ಮತ್ತು ಸಹಾಯಧನ :**

ಸದರಿ ಯೋಜನೆಯು ಸಂಪೂರ್ಣವಾಗಿ ರಾಜ್ಯವಲಯ ಯೋಜನೆಯಾಗಿದ್ದು, ಒಟ್ಟು ರೂ. 500.00 ಲಕ್ಷಗಳನ್ನು ನಿಗಧಿಪಡಿಸಲಾಗಿರುತ್ತದೆ.

1. **ಜಿಲ್ಲಾ ಹಾಪ್‌ಕಾಮ್ಸ್ ಅಧೀನ ತೋಟಗಾರಿಕೆ ಉತ್ಪನ್ನಗಳಿಗೆ ಉನ್ನತ ಮಾರುಕಟ್ಟೆ ಕೇಂದ್ರವನ್ನು ಸ್ಥಾಪಿಸುವ ಬಗ್ಗೆ.**

   ರೈತರ ಗುಂಪು / ಸಂಘಗಳು ತಾವು ಬೆಳೆದಂತಹ ಹಣ್ಣು ಮತ್ತು ತರಕಾರಿಗಳನ್ನು ಮಾರಾಟ ಮಾಡಲು ಅನುವಾಗುವಂತೆ ಜಿಲ್ಲಾ ಹಾಪ್‌ಕಾಮ್ಸ್ ಅಧೀನ ತೋಟಗಾರಿಕೆ ಉತ್ಪನ್ನಗಳ ಉನ್ನತ ಮಾರುಕಟ್ಟೆ ಕೇಂದ್ರವನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ. ಪ್ರತಿ ಮಾರುಕಟ್ಟೆ ಕೇಂದ್ರವು ಹೆಚ್ಚು ಉತ್ಪಾದನೆಯಾಗುವ, ಮಾರುಕಟ್ಟೆಯಲ್ಲಿ ಬೇಡಿಕೆ ಇರುವಂತಹ ಕೆಲವು ಹಣ್ಣು ಮತ್ತು ತರಕಾರಿಗಳ ಮಾರಾಟಕ್ಕೆ ಮಾತ್ರ ಸೀಮಿತವಾಗಿದ್ದು, ರೈತರಿಗೆ ತಾವು ಬೆಳೆದ ಹಣ್ಣು ಮತ್ತು ತರಕಾರಿಗಳನ್ನು ಖಾಸಗಿಯವರಿಗೆ ಹಾಗೂ ಸಂಘ / ಸಂಸ್ಥೆಗಳಿಗೆ ಹರಾಜಿನ ಮೂಲಕ ಮಾರಾಟ ಮಾಡಲು ಉದ್ದೇಶಿಸಲಾಗಿದೆ. ಪ್ರಾಯೋಗಿಕವಾಗಿ ಒಂದು ಜಿಲ್ಲಾ ಹಾಪ್‌ಕಾಮ್ಸ್ ಅಧೀನ ಈ ಕೇಂದ್ರವನ್ನು ಸ್ಥಾಪಿಸಲು ಉದ್ದೇಶಿಸಲಾಗಿದ್ದು, ಮೊದಲನೇ ವರ್ಷದ ಅಗತ್ಯತೆಗಾಗಿ ರೂ.2.65 ಕೋಟಿಗಳನ್ನು ನಿಗಧಿಗೊಳಿಸಲಾಗಿದೆ.

2. **ಸ್ಪಾಟ್ ಬಿಲ್ಲಿಂಗ್ ಮಿಷನ್ :-**

   ಮಳಿಗೆಗಳಲ್ಲಿ ಮಾರಾಟ ಮಾಡುವ ಹಣ್ಣು ಮತ್ತು ತರಕಾರಿಗಳನ್ನು ನಿಖರ ತೂಕ ಹಾಗೂ ಬಿಲ್ಲಿನೊಂದಿಗೆ ಗ್ರಾಹಕರಿಗೆ ನೀಡಲು ಹಾಪ್‌ಕಾಮ್ಸ್ ಮಾರಾಟ ಮಳಿಗೆಗಳಿಗೆ ಸ್ಪಾಟ್ ಬಿಲ್ಲಿಂಗ್ ಮಿಷನ್‌ಗಳನ್ನು ಸರಬರಾಜು ಮಾಡಲು ಉದ್ದೇಶಿಸಲಾಗಿದೆ. ಪ್ರತಿ ಸ್ಪಾಟ್ ಬಿಲ್ಲಿಂಗ್ ಮಿಷನ್ ಅನ್ನು ಅಂದಾಜು ರೂ.50,000/- ವೆಚ್ಚದಂತೆ ಖರೀದಿಸಿ ಸರಬರಾಜು ಮಾಡಲು ರೂ.33.00 ಲಕ್ಷಗಳನ್ನು 2014-15 ನೇ ಸಾಲಿಗೆ ನಿಗಧಿಗೊಳಿಸಲಾಗಿದೆ.

3. **ಆಧುನಿಕ ಮಾರಾಟ ಮಳಿಗೆ :-**

   ಹಾಪ್‌ಕಾಮ್ಸ್ ಅಧೀನ ಹಾಲಿ ನಡೆಸಲಾಗುತ್ತಿರುವ ಮಳಿಗೆಗಳು ಚಿಕ್ಕದಾಗಿದ್ದು, ಹೆಚ್ಚಾಗಿ ವಾಣಿಜ್ಯ ಪ್ರದೇಶದಲ್ಲಿ ನಿರ್ಮಾಣವಾಗಿರುವುದಿಲ್ಲ. ಆದ್ದರಿಂದ, ಆಧುನಿಕ ಮಾರಾಟ ಮಳಿಗೆಗಳನ್ನು ವಾಣಿಜ್ಯ ಪ್ರದೇಶದಲ್ಲಿ ಸ್ಥಾಪಿಸಿ ಹೆಚ್ಚು ಗ್ರಾಹಕರನ್ನು ಸೆಳೆದು ಮಳಿಗೆಯ ವಹಿವಾಟನ್ನು ವೃದ್ಧಿಸಲು ಉದ್ದೇಶಿಸಲಾಗಿದೆ. ಹಣ್ಣು, ತರಕಾರಿ, ಮೊಟ್ಟೆ, ಜೇನು ತುಪ್ಪ, ಸಾಂಬಾರು ಪದಾರ್ಥಗಳಲ್ಲದೇ ಹಣ್ಣಿನ ಜ್ಯೂಸ್‌ಗಳನ್ನು ತಯಾರಿಸಿ ಇದೇ ಮಳಿಗೆಯಲ್ಲಿ ಮಾರಾಟ ಮಾಡಲು ವ್ಯವಸ್ಥೆ ಕಲ್ಪಿಸಲಾಗುವುದು. ಆಧುನಿಕ ರ್‍ಯಾಕ್‌ಗಳು, ಎಲೆಕ್ಟ್ರಾನಿಕ್ ಬಿಲ್ಲಿಂಗ್, ಉತ್ತಮ ಲೈಟಿಂಗ್ ವ್ಯವಸ್ಥೆವುಳ್ಳ ಮಳಿಗೆಯನ್ನು ರೂ.20.00 ಲಕ್ಷ ಪ್ರತಿ ಮಳಿಗೆಯಂತೆ ಸ್ಥಾಪಿಸಲು ಉದ್ದೇಶಿಸಲಾಗಿದೆ. 2014-15 ನೇ ಸಾಲಿಗೆ 5 ಆಧುನಿಕ ಮಾರಾಟ ಮಳಿಗೆಗಳನ್ನು ರೂ.1.00 ಕೋಟಿ ವೆಚ್ಚದಲ್ಲಿ ಸ್ಥಾಪಿಸಲಾಗುವುದು.

4. **ತರಬೇತಿ ಕಾರ್ಯಕ್ರಮ :-**

   ಪ್ರತಿ ಜಿಲ್ಲಾ ಹಾಪ್‌ಕಾಮ್ಸ್‌ಗಳು ರೈತ ಸದಸ್ಯರ ಸದಸ್ಯತ್ವವನ್ನು ಹೊಂದಿರುತ್ತದೆ. ಒಟ್ಟಾರೆ 22 ಜಿಲ್ಲಾ ಹಾಪ್‌ಕಾಮ್ಸ್‌ಗಳಲ್ಲಿ 46491 ಮಂದಿ ಸದಸ್ಯರಿರುತ್ತಾರೆ. ಈ ರೈತ ಸದಸ್ಯರಿಗೆ ಪ್ರತಿ ಮಾಹೆಯಲ್ಲಿ ಬೇಡಿಕೆ ಇರುವ ಬೆಳೆಗಳು, ಅವುಗಳ ಕೋಯ್ಲೋತ್ತರ ನಿರ್ವಹಣೆ, ಮಾರುಕಟ್ಟೆಯ ವಿವರಗಳ ಬಗ್ಗೆ ಮಾಹಿತಿ ನೀಡಲು ಪ್ರತಿ ಹಾಪ್‌ಕಾಮ್ಸ್‌ನಲ್ಲಿ 2 ತರಬೇತಿ ನಡೆಸಲು ರೂ.60,000/- ಗಳನ್ನು ನಿಗಧಿಗೊಳಿಸಲಾಗಿದೆ. ಸದರಿ ಘಟಕದಡಿ ಪ್ರಸಕ್ತ ಸಾಲಿಗೆ ರೂ.14.00 ಲಕ್ಷಗಳನ್ನು ನಿಗಧಿಗೊಳಿಸಲಾಗಿದೆ.

**5. ಪ್ರಚಾರ ಕಾರ್ಯಕ್ರಮ :–**

ಕೆ.ಹೆಚ್.ಎಫ್. ಹಾಗೂ ಜಿಲ್ಲಾ ಹಾಪ್‌ಕಾಮ್ಸ್‌ಗಳ ಕಾರ್ಯಚಟುವಟಿಕೆಗಳ ಬಗ್ಗೆ ಹೆಚ್ಚು ಪ್ರಚಾರ ಮಾಡಲು ಕರಪತ್ರಗಳು, ಬ್ಯಾನರ್‌ಗಳ ಮುದ್ರಣ ಮಾಡಲಾಗುವುದು. ಕೆ.ಹೆಚ್.ಎಫ್. ಹಾಗೂ ಜಿಲ್ಲಾ ಹಾಪ್‌ಕಾಮ್ಸ್‌ಗಳ ಕಿರುಚಿತ್ರವನ್ನು ದೂರದರ್ಶನದಲ್ಲಿ ಪ್ರಸಾರ ಮಾಡಲು ಸದರಿ ಘಟಕದಡಿ 2014–15 ನೇ ಸಾಲಿಗೆ ರೂ.5.00 ಲಕ್ಷಗಳನ್ನು ನಿಗಧಿಗೊಳಿಸಲಾಗಿದೆ.

**6. ಮಳಿಗೆಗಳಿಗೆ ಮೋಡೆಮ್ ಅಳವಡಿಸುವ ಬಗ್ಗೆ :–**

ಸ್ಪಾಟ್ ಬಿಲ್ಲಿಂಗ್ ಮಿಷನ್‌ಗಳನ್ನು ದಿನ ನಿತ್ಯ ಉಪಯೋಗಿಸಲು ಅನುವಾಗುವಂತೆ ಹಾಪ್‌ಕಾಮ್ಸ್ ಕಛೇರಿಯಿಂದ ಹಣ್ಣು ಮತ್ತು ತರಕಾರಿಗಳ ಬೆಲೆಯನ್ನು ಮಳಿಗೆಗಳಿಗೆ ಕಳುಹಿಸಲು ಹಾಗೂ ಮಳಿಗೆಗಳಲ್ಲಿ ನಡೆಸಲಾಗುವ ವಹಿವಾಟಿನ ಬಗ್ಗೆ ಕೇಂದ್ರ ಕಛೇರಿಗೆ ಮಾಹಿತಿಯನ್ನು ಕಳುಹಿಸಲು ಪ್ರತಿ ಮಳಿಗೆಗೆ ಮೋಡೆಮ್ ಅಳವಡಿಸಲು ಉದ್ದೇಶಿಸಲಾಗಿದೆ. ರಾಜ್ಯದ 22 ಹಾಪ್‌ಕಾಮ್ಸ್ ಅಧೀನ ಇರುವ ಮಳಿಗೆಗಳಲ್ಲಿ ಮೋಡೆಮ್ ಅಳವಡಿಸಲು ರೂ.40.00 ಲಕ್ಷಗಳನ್ನು ನಿಗಧಿಗೊಳಿಸಿದೆ.

**7. ಮಾರಾಟ ಮಳಿಗೆಗಳಿಗೆ ಸೋಲಾರ್ ದೀಪ ಅಳವಡಿಕೆ :–**

ಬೆಂಗಳೂರು ಹೊರತುಪಡಿಸಿ ಇತರೆ ಜಿಲ್ಲೆಗಳಲ್ಲಿ ವಿದ್ಯುತ್ ಪೂರೈಕೆ ಸಮರ್ಪಕವಾಗಿ ಇರುವುದಿಲ್ಲ. ಆದ್ದರಿಂದ ಮಳಿಗೆಗೆ ಸೋಲಾರ್ ದೀಪದ ಅಳವಡಿಕೆ ಮಾಡಲು ಪ್ರಸ್ತಾಪಿಸಲಾಗಿದೆ. ಪ್ರತಿ ಮಳಿಗೆಗೆ 4 ದೀಪ, ಬ್ಯಾಟರಿ ಹಾಗೂ ಸೋಲಾರ್ ಪ್ಲೇಟ್‌ಗಳ ಅಳವಡಿಕೆಗೆ ಅಂದಾಜು ರೂ.33,000/– ಗಳ ವೆಚ್ಚವಾಗುವುದು. ಪ್ರಸಕ್ತ ಸಾಲಿಗೆ 55 ಮಳಿಗೆಗಳಿಗೆ ಸೋಲಾರ್ ದೀಪ ಅಳವಡಿಸಲು ರೂ.18.00 ಲಕ್ಷಗಳನ್ನು ನಿಗಧಿಗೊಳಿಸಲಾಗಿದೆ.

**8. ಆಡಳಿತ ವೆಚ್ಚ :–**

ಕರ್ನಾಟಕ ರಾಜ್ಯ ಸಹಕಾರಿ ತೋಟಗಾರಿಕಾ ಮಾರಾಟ ಮಹಾಮಂಡಳ (ನಿ) ದ ಅಧಿಕಾರಿ / ಸಿಬ್ಬಂಧಿಗಳ ವೇತನ, ವಾಹನ ರಿಪೇರಿ ಮತ್ತು ನಿರ್ವಹಣೆ ಹಾಗೂ ಕಂಪ್ಯೂಟರ್ ನಿರ್ವಹಣೆಗಾಗಿ ರೂ.25.00 ಲಕ್ಷಗಳನ್ನು ನಿಗಧಿಪಡಿಸಲಾಗಿದೆ. (ವಿವರ ಕೆಳಕಂಡಂತಿದೆ).

| **ಕ್ರಮ ಸಂ.** | **ವಿವರಗಳು** | **ಅನುದಾನದ ಅವಶ್ಯಕತೆ (ರೂ ಲಕ್ಷಗಳಲ್ಲಿ)** |
|---|---|---|
| 1. | ಅಧಿಕಾರಿ ಹಾಗೂ ಸಿಬ್ಬಂಧಿಗಳ ವೇತನ (ಏಪ್ರಿಲ್ 14 ಮಾರ್ಚ್ 15) | 15.00 |
| 2. | ಪ್ರಯಾಣ ವೆಚ್ಚ | 2.00 |
| 3. | ವಾಹನ ರಿಪೇರಿ ಹಾಗೂ ಇಂಧನ | 3.00 |
| 4. | ಇಂಟರ್ ನೆಟ್ / ದೂರವಾಣಿ / ಕಂಪ್ಯೂಟರ್ ನಿರ್ವಹಣೆ / ಸ್ಟೇಷನರಿ ಸಾಮಗ್ರಿ, ಸ್ಟಾಂಪ್ ವೆಚ್ಚ. | 2.00 |
| 5. | ಕಂಪ್ಯೂಟರ್ ಸಹಾಯಕರು / ಲೆಕ್ಕ ಪರಿಶೋಧಕರ ವೇತನ (ಗುತ್ತಿಗೆ ಆಧಾರದ ಮೇಲೆ) | 3.00 |
| | **ಒಟ್ಟು** | **25.00** |

| ಕ್ರಮ ಸಂ. | ಕಾರ್ಯಕ್ರಮ | ಭೌತಿಕ (ಸಂಖ್ಯೆ) | ಆರ್ಥಿಕ (ರೂ ಲಕ್ಷಗಳಲ್ಲಿ) |
|---|---|---|---|
| 1. | ಜಿಲ್ಲಾ ಹಾಪ್‌ಕಾಮ್ಸ್ ಅಧೀನ ತೋಟಗಾರಿಕೆ ಉತ್ಪನ್ನಗಳಿಗೆ ಉನ್ನತ ಮಾರುಕಟ್ಟೆ ಕೇಂದ್ರವನ್ನು ಸ್ಥಾಪಿಸುವ ಬಗ್ಗೆ. | 1 | 265.00 |
| 2. | ಸ್ಪಾಟ್ ಬಿಲ್ಲಿಂಗ್ ಮಿಷನ್ | 66 | 33.00 |
| 3. | ಆಧುನಿಕ ಮಾರಾಟ ಮಳಿಗೆ | 5 | 100.00 |
| 4. | ತರಬೇತಿ ಕಾರ್ಯಕ್ರಮ | **-** | **14.00** |
| 5 | ಪ್ರಚಾರ ಕಾರ್ಯಕ್ರಮ | **-** | **5.00** |
| 6 | ಮಳಿಗೆಗಳಿಗೆ ಮೋಡೆಮ್ ಅಳವಡಿಸುವ ಬಗ್ಗೆ | **22** | **40.00** |
| 7. | ಮಾರಾಟ ಮಳಿಗೆಗಳಿಗೆ ಸೋಲಾರ್ ದೀಪ ಅಳವಡಿಕೆ | **55** | **18.00** |
| 8. | ಆಡಳಿತ ವೆಚ್ಚ | **-** | **25.00** |
| | **ಒಟ್ಟು** | **149** | **500.00** |

ಕೆ.ಹೆಚ್.ಎಫ್ ಒಂದು ಸಹಕಾರ ಸಂಸ್ಥೆಯಾದ್ದರಿಂದ, ಸದರಿ ಸಂಸ್ಥೆಗೆ ಶೇ.100 ರ ಅನುಧಾನವನ್ನು ಸಹಾಯಧನದ ರೂಪದಲ್ಲಿ ನೀಡಲಾಗುವುದು.

**V. ತಾಂತ್ರಿಕ ಪರಿಶೀಲನಾ ಕ್ರಮಗಳು :-**

ವ್ಯವಸ್ಥಾಪಕ ನಿರ್ದೇಶಕರು, ಕೆ.ಹೆಚ್.ಎಫ್. ರವರು ಪರಿಶೀಲನೆ ಸಮಯದಲ್ಲಿ ಅನುಮೋದನೆಯಾದ ನಕ್ಷೆ ಮತ್ತು ಅಂದಾಜುಗಳ ಪ್ರಕಾರ ಘಟಕ ಕಾರ್ಯಕ್ರಮಗಳು ಅನುಷ್ಟಾನಗೊಳಿಸುವ ಕುರಿತು ಕ್ರಮವಹಿಸುವುದು.

**VI. ನಿರ್ದೇಶನಾಲಯದ ಅನುಮೋದನೆ:-**

ಯೋಜನೆಯನ್ನು ಅನುಷ್ಠಾನಗೊಳಿಸುವ ಸಂದರ್ಭದಲ್ಲಿ ಘಟಕವಾರು ನಕ್ಷೆ ಮತ್ತು ಅಂದಾಜುಗಳನ್ನು ನಿರ್ದೇಶಕರಿಂದ ಅನುಮೋದನೆ ಪಡೆಯುವುದು.

**VII .ಸಹಾಯಧನ ವಿತರಣೆ:**

ಸಹಾಯದನವನ್ನು ತೋ.ಜ.ನಿ., ತರಕಾರಿಗಳು ವಿಭಾಗದಿಂದ Grant-In-Aid ಮುಖಾಂತರ ಖಜಾನೆಯಿಂದ ಹಣಸೆಳೆದು ವ್ಯವಸ್ಥಾಪಕ ನಿರ್ದೇಶಕರು, ಕೆ.ಹೆಚ್.ಎಫ್., ರವರಿಗೆ ಚೆಕ್ ಮುಖಾಂತರ ನೀಡುವುದು

**VII. ಅನುಷ್ಠಾನ ವೇಳಾಪಟ್ಟಿ:**

1) ಯೋಜನೆಗೆ ನಿಗಧಿಪಡಿಸಿದ ಅನುಷ್ಠಾನದ ವೇಳಾಪಟ್ಟಿಯಂತೆ ಮತ್ತು MPIC ಅನುಸಾರ ಅನುಷ್ಠಾನ -ಗೊಳಿಸತಕ್ಕದ್ದು.

**2)** ಯೋಜನೆಯನ್ನು ಆರ್ಥಿಕ ವರ್ಷದಲ್ಲಿ ಅನುಷ್ಠಾನಗೊಳಿಸಿ ಅನುದಾನದ ಸದ್ಬಳಕೆಯ ಕುರಿತು ವರದಿ ನೀಡುವುದು ವ್ಯವಸ್ಥಾಪಕ ನಿರ್ದೇಶಕರು, ಕೆ.ಹೆಚ್.ಎಫ್. ರವರ ಜವಾಬ್ದಾರಿಯಾಗಿರುತ್ತದೆ.

**VII.ಆರ್ಥಿಕ ಪ್ರತ್ಯಾಯೋಜನೆ ( Delegation of Power) :**

ಈ ಯೋಜನೆಯಡಿ ಸಹಾಯಧನ ಮಂಜೂರು ಮಾಡಲು ರಾಜ್ಯ ಸರ್ಕಾರದ ಆರ್ಥಿಕ ಪ್ರತ್ಯಾದೇಶದನ್ವಯ ( Delegation of Power) ಕ್ರಮ ಕೈಗೊಳ್ಳತಕ್ಕದ್ದು.

**X. Reporting and documentation (ವರದಿ ಮಾಡುವುದು ಮತ್ತು ದಾಖಲೆಗಳನ್ನು ನಿರ್ವಹಿಸುವುದು).**

ಪ್ರತಿ ಮಾಹೆಯ ಪ್ರಗತಿ ವರದಿಯನ್ನು ಇಮೇಲ್ ಮೂಲಕ ತಿಂಗಳ ೩ನೇ ದಿನಾಂಕದ ಒಳಗಾಗಿ ತಪ್ಪದೇ ಸಲ್ಲಿಸುವುದು. (ಸಮಸ್ಯೆ ಇದ್ದಲ್ಲಿ, ತೋ. ನಿ. ರವರನ್ನು ಸಂಪರ್ಕಿಸುವುದು). Monthly progress reports shall be sent to jdhveg@gmail.com E-mail on 3rd of every month without fail.

**X. Reporting and Documentation (ವರದಿ ಮಾಡುವುದು ಮತ್ತು ದಾಖಲೆಗಳನ್ನು ನಿರ್ವಹಿಸುವುದು).**

1. ಪ್ರತಿ ಮಾಹೆಯ ಪ್ರಗತಿ ವರದಿಯನ್ನು ಇಮೇಲ್ ಮೂಲಕ ತಿಂಗಳ 3ನೇ ದಿನಾಂಕದ ಒಳಗಾಗಿ ತಪ್ಪದೇ ಸಲ್ಲಿಸುವುದು. (ಸಮಸ್ಯೆ ಇದ್ದಲ್ಲಿ, **ತೋಟಗಾರಿಕೆ ಅಪರ ನಿರ್ದೇಶಕರು (ಹಣ್ಣುಗಳು)** ರವರ ಕಛೇರಿಯನ್ನು ಸಂಪರ್ಕಿಸುವುದು).
2. ಅಂತಿಮ ಪ್ರಗತಿ ವರದಿ, ಯಶೋಗಾಥೆಗಳು ಮತ್ತು ಯೋಜನೆಯ ಅನುಷ್ಠಾನದಿಂದ ಆಗುವ ಪ್ರಯೋಜನಗಳನ್ನು (ಲಿಖಿತ, ದೃಶ್ಯ ಮತ್ತು ಶ್ರವಣ) ಸಾಫ್ಟ್ ಕಾಪಿ ಮತ್ತು ಹಾರ್ಡ್ ಕಾಪಿಯೊಂದಿಗೆ ತೋಟಗಾರಿಕೆ ಅಪರ ನಿರ್ದೇಶಕರು (ಹಣ್ಣುಗಳು), ರವರಿಗೆ ಮತ್ತು ತೋಟಗಾರಿಕೆ ಉಪ ನಿರ್ದೇಶಕರು (ತೋಟಗಾರಿಕೆ ಮಾಹಿತಿ ಕೇಂದ್ರ) ರವರಿಗೆ ಕಳುಹಿಸುವುದು.
3. **ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರಾಟ ನಿಗಮ ನಿಯಮಿತ, ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ದ್ರಾಕ್ಷಾರಸ ಮಂಡಳಿ ಹಾಗೂ ವ್ಯವಸ್ಥಾಪಕ ನಿರ್ದೇಶಕರು ಕೆ.ಹೆಚ್.ಎಫ್ ರವರು,** ತೋಟಗ -ಾರಿಕೆ ಇಲಾಖೆಯಿಂದ ನೀಡಲಾಗಿರುವ ಅನುದಾನದ ವಿನಿಯೋಗದ ಬಗ್ಗೆ ಕಾಲಕಾಲಕ್ಕೆ ಪ್ರಗತಿ **ವಿವರಗಳುಳ್ಳ ವರದಿ -ಗಳನ್ನು ನಿರ್ದೇಶನಾಲಯಕ್ಕೆ ಸಲ್ಲಿಸತಕ್ಕದ್ದು.**

**ಯೋಜನೆಯಡಿ ಪ್ರಸ್ತಾಪಿಸಲಾದ ಕಾರ್ಯಕ್ರಮಗಳ ಘೋಷ್ವಾರೆ**

| ಕ್ರ. ಸಂ. | ಕಾರ್ಯಕ್ರಮ | ಅನುದಾನ (ರೂ.ಲಕ್ಷಗಳಲ್ಲಿ) |
|---|---|---|
| 1. | ಕೆ.ಹೆಚ್.ಎಫ್ ಮುಖಾಂತರ ತೋಟಗಾರಿಕೆ ಉತ್ಪನ್ನಗಳಿಗೆ ಸಮಗ್ರ ಮಾರುಕಟ್ಟೆ ಸೌಲಭ್ಯ ಕಾರ್ಯಕ್ರಮ | 500.00 |
| 2. | ದ್ರಾಕ್ಷಾರಸ ಮಂಡಳಿಯ ಅಭಿವೃದ್ಧಿ ಕಾರ್ಯಕ್ರಮ | 200.00 |
| 3. | ಮಾವು ಅಭಿವೃದ್ಧಿ ನಿಗಮ ಮಂಡಳಿ | 754.00 |
| | **ಒಟ್ಟು** | **1454.00** |